# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಜಲ ಸಂಪನ್ಮೂಲ ಇಲಾಖೆಯಲ್ಲಿ ಹೊಸದಾಗಿ ನೇಮಕಗೊಳ್ಳಲಿರುವ ಇಂಜಿನಿಯರ್‌ಗಳಿಗೆ ಸಮಗ್ರ ಜಲ ಸಂಪನ್ಮೂಲ ನಿರ್ವಹಣೆಯ ತರಬೇತಿಯನ್ನು ನೀಡುವ ಬಗ್ಗೆ

ಓದಲಾಗಿದೆ: 1) ನಿಬಂಧಕರು / ಮುಖ್ಯ ಇಂಜಿನಿಯರ್. ಎಸಿಐಡಬ್ಲ್ಯೂಆರ್‌ಎಂ. ಬೆಂಗಳೂರು. ಇವರ ಪತ್ರ ಸಂ. ಮುಇಂ/ಎಸಿಐಡಬ್ಲ್ಯೂಆರ್‌ಎಂ/ ಸಇಂ-11/2018-19/786. ದಿನಾಂಕ: 01.02.2019

2) ಸಮಗ್ರ ಜಲ ಸಂಪನ್ಮೂಲ ನಿರ್ವಹಣಾ ಉನ್ನತ ಕೇಂದ್ರದ 4ನೇ ಕಾರ್ಯಗಾರಿ ಸಮಿತಿ ಸಭೆಯ ನಡವಳಿ.

*****

ಪ್ರಸ್ತಾವನೆ:

ಮೇಲೆ ಓದಲಾದ (1) ರ ಪ್ರಸ್ತಾವನೆಯಲ್ಲಿ ನಿಬಂಧಕರು / ಮುಖ್ಯ ಇಂಜಿನಿಯರ್, ಎಸಿಐಡಬ್ಲ್ಯೂಆರ್‌ಎಂ ಇವರು ಸಮಗ್ರ ಜಲ ಸಂಪನ್ಮೂಲ ನಿರ್ವಹಣಾ ಉನ್ನತ ಕೇಂದ್ರವು ಜಲ ಸಂಪನ್ಮೂಲ ಇಲಾಖೆಯಲ್ಲಿ ಹಾಲಿ ಸೇವೆ ಸಲ್ಲಿಸುತ್ತಿರುವ ಸಹಾಯಕ ಕಾರ್ಯಪಾಲಕ ಇಂಜಿನಿಯರ್ / ಸಹಾಯಕ ಇಂಜಿನಿಯರ್ / ಕಿರಿಯ ಇಂಜಿನಿಯರ್‌ಗಳಿಗೆ ಸಮಗ್ರ ಜಲ ಸಂಪನ್ಮೂಲ ನಿರ್ವಹಣೆಯ ಮತ್ತು ಹಲವಾರು ವಿಷಯ ಆಧಾರಿತ ತರಬೇತಿಗಳನ್ನು ನೀಡುತ್ತಿದೆ. ಜಲ ಸಂಪನ್ಮೂಲ ಇಲಾಖೆಯಲ್ಲಿ ಸೇವೆ ಸಲ್ಲಿಸಲು ಅವಶ್ಯವಿರುವ ತಾಂತ್ರಿಕ ತರಬೇತಿಯನ್ನು ಪಡೆದುಕೊಂಡು ತಮ್ಮ ಕೆಲಸಗಳಲ್ಲಿ ಅಳವಡಿಸಿಕೊಳ್ಳಲು ಈ ತರಬೇತಿಗಳು ಉಪಯುಕ್ತವಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ಕರ್ನಾಟಕ ಸರ್ಕಾರವು ಜಲ ಸಂಪನ್ಮೂಲ ಇಲಾಖೆಗೆ ಹೊಸದಾಗಿ ನೇಮಕಗೊಳ್ಳಲಿರುವ ಸಹಾಯಕ ಇಂಜಿನಿಯರ್ ಮತ್ತು ಕಿರಿಯ ಇಂಜಿನಿಯರ್‌ಗಳಿಗೆ ಅರ್ಹತಾ ಪರೀಕ್ಷಾ ಅವಧಿಯಲ್ಲಿ ಕೃಷ್ಣರಾಜಸಾಗರದಲ್ಲಿರುವ ಇಂಜಿನಿಯರಿಂಗ್ ಸಂಶೋಧನಾ ಕೇಂದ್ರದ ಇಂಜಿನಿಯರಿಂಗ್ ಸಿಬ್ಬಂದಿ ತರಬೇತಿ ಕೇಂದ್ರದಲ್ಲಿ 40 ದಿನಗಳ ಓರಿಯಂಟೇಷನ್ ತರಬೇತಿಯನ್ನು ನೀಡಲಾಗುತ್ತದೆ. ಈ ತರಬೇತಿಯಲ್ಲಿ ಆಡಳಿತಾತ್ಮಕ ಹಾಗೂ ತಾಂತ್ರಿಕ ವಿಷಯಗಳ ಬಗ್ಗೆ ತರಬೇತಿ ನೀಡಲಾಗುವುದು. ಈ ತರಬೇತಿ ನಂತರವೇ ಸದರಿ ಇಂಜಿನಿಯರ್‌ಗಳ ಅರ್ಹತಾ ಪರೀಕ್ಷಾ ಅವಧಿಯನ್ನು ಘೋಷಿಸಲಾಗುತ್ತದೆ ಎಂದು ತಿಳಿಸಿರುತ್ತಾರೆ.

ಇದೇ ಮಾದರಿಯಲ್ಲಿ ಜಲ ಸಂಪನ್ಮೂಲ ನಿರ್ವಹಣಾ ಉನ್ನತ ಕೇಂದ್ರವು ಆಯೋಜಿಸುವ ಎಲ್ಲಾ ತರಬೇತಿಗಳನ್ನು ಹೊಸದಾಗಿ ನೇಮಕಗೊಳ್ಳಲಿರುವ ಸಹಾಯಕ ಕಾರ್ಯಪಾಲಕ ಇಂಜಿನಿಯರ್ / ಸಹಾಯಕ ಇಂಜಿನಿಯರ್ / ಕಿರಿಯ ಇಂಜಿನಿಯರ್‌ಗಳಿಗೆ ಸಮಗ್ರ ಜಲ ಸಂಪನ್ಮೂಲ ನಿರ್ವಹಣೆಯ

... 2



Generated from eOffice by DEEPA. C.K., WRD-SA-SRVB(DCK), SENIOR ASSISTANT, WATER RESOURCE SEC on 26/04/2022 12:31 PM
Generated from eOffice by DEEPA. C.K., WRD-SA-SRVB(DCK), SENIOR ASSISTANT, WATER RESOURCE SEC on 04/05/2022 04:36 PM

ಕುರಿತು ಜಲ ಸಂಪನ್ಮೂಲ ನಿರ್ವಹಣಾ ಉನ್ನತ ಕೇಂದ್ರದಿಂದ ನೀಡುವ ಐದು ವಿಷಯಗಳ ತರಬೇತಿಯನ್ನು ನೀಡುವುದು ಅತ್ಯಾವಶ್ಯಕವಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ಮೇಲೆ ಓದಲಾದ (2) ರ ನಡವಳಿಯಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ. ದಿನಾಂಕ: 07.01.2019 ರಂದು ನಡೆದ ಸಮಗ್ರ ಜಲ ಸಂಪನ್ಮೂಲ ನಿರ್ವಹಣಾ ಉನ್ನತ ಕೇಂದ್ರದ 4ನೇ ಕಾರ್ಯಗಾರಿ ಸಮಿತಿ ಸಭೆಯಲ್ಲಿ ಜಲಸಂಪನ್ಮೂಲ ಇಲಾಖೆಗೆ ಹೊಸದಾಗಿ ಸೇರ್ಪಡೆಯಾಗುವ ಇಂಜಿನಿಯರುಗಳು ತಮ್ಮ ನಿರೀಕ್ಷಣಾ ಅವಧಿಯಲ್ಲೇ ಸಮಗ್ರ ಜಲಸಂಪನ್ಮೂಲ ನಿರ್ವಹಣೆ ತರಬೇತಿಯನ್ನು ಪಡೆಯುವುದು ಕಡ್ಡಾಯಗೊಳಿಸುವ ಬಗ್ಗೆ ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ ಹೊಸದಾಗಿ ನೇಮಕಗೊಂಡಿರುವ ಜಲ ಸಂಪನ್ಮೂಲ ಇಲಾಖೆಯ ಇಂಜಿನಿಯರುಗಳಿಗೆ ಸಮಗ್ರ ಜಲ ಸಂಪನ್ಮೂಲ ನಿರ್ವಹಣಾ ಉನ್ನತ ಕೇಂದ್ರದಿಂದ ನಡೆಸುವ ಜಲ ಸಂಪನ್ಮೂಲ ನಿರ್ವಹಣಾ ತರಬೇತಿಯನ್ನು ಕಡ್ಡಾಯವಾಗಿ ಪಡೆದ ನಂತರವೇ ಅರ್ಹತಾ ಪರೀಕ್ಷಾ ಅವಧಿಯನ್ನು ಘೋಷಿಸುವಂತೆ ಕೋರಿರುತ್ತಾರೆ.

ನಿಬಂಧಕರು / ಮುಖ್ಯ ಇಂಜಿನಿಯರ್, ಎಸಿಐಡಬ್ಲ್ಯೂಆರ್ಎಂ, ಬೆಂಗಳೂರು ಇವರು ಸಲ್ಲಿಸಿರುವ ಪ್ರಸ್ತಾವನೆಯನ್ನು ಸರ್ಕಾರವು ಪರಿಗಣಿಸಿ, ಈ ಕೆಳಗಿನಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ : ಜಸಂಇ 22 ಸೇಸಕಿ 2019, ಬೆಂಗಳೂರು, ದಿನಾಂಕ: 20.03.2019.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಹೊಸದಾಗಿ ನೇಮಕಗೊಂಡಿರುವ ಜಲ ಸಂಪನ್ಮೂಲ ಇಲಾಖೆಯ ಇಂಜಿನಿಯರುಗಳಿಗೆ ಸಮಗ್ರ ಜಲ ಸಂಪನ್ಮೂಲ ನಿರ್ವಹಣಾ ಉನ್ನತ ಕೇಂದ್ರದಿಂದ ನಡೆಸುವ ಜಲ ಸಂಪನ್ಮೂಲ ನಿರ್ವಹಣಾ ತರಬೇತಿಯನ್ನು ಕಡ್ಡಾಯವಾಗಿ ಪಡೆದ ನಂತರವೇ ಅರ್ಹತಾ ಪರೀಕ್ಷಾ ಅವಧಿಯನ್ನು ಘೋಷಿಸುವಂತೆ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಹೆಚ್.ಎಸ್. ಚನ್ನಬಸಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ,
ಜಲ ಸಂಪನ್ಮೂಲ ಇಲಾಖೆ (ಸೇವೆಗಳು-ಬಿ)

**<u>ಇವರಿಗೆ:</u>**

1) ಪ್ರಧಾನ ಮಹಾಲೇಖಪಾಲರು (ಜಿ & ಎಸ್.ಎಸ್.ಎ.) / (ಇ & ಆರ್.ಎಸ್.ಎ) ಕರ್ನಾಟಕ, ಆಡಿಟ್ ಭವನ, ಬೆಂಗಳೂರು.
2) ಪ್ರಧಾನ ಮಹಾಲೇಖಪಾಲರು (ಎ & ಇ) ಕರ್ನಾಟಕ, ಪಾರ್ಕ್‌ಹೌಸ್, ಬೆಂಗಳೂರು.
3) ಮುಖ್ಯ ಇಂಜಿನಿಯರ್, ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು.

... 3

4) ವ್ಯವಸ್ಥಾಪಕ ನಿರ್ದೇಶಕರು. ಕರ್ನಾಟಕ ನೀರಾವರಿ ನಿಗಮ ನಿಯಮಿತ. ಬೆಂಗಳೂರು.
5) ವ್ಯವಸ್ಥಾಪಕ ನಿರ್ದೇಶಕರು. ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ. ಬೆಂಗಳೂರು.
6) ವ್ಯವಸ್ಥಾಪಕ ನಿರ್ದೇಶಕರು. ಕಾವೇರಿ ನೀರಾವರಿ ನಿಗಮ ನಿಯಮಿತ. ಬೆಂಗಳೂರು.
7) ವ್ಯವಸ್ಥಾಪಕ ನಿರ್ದೇಶಕರು. ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ. ಬೆಂಗಳೂರು.
8) ಪೊಲೀಸ್ ಮಹಾನಿರ್ದೇಶಕರು. ವಿಚಕ್ಷಣಾ ದಳ. ಬಸವ ಭವನ. ಬೆಂಗಳೂರು.
9) ನಿರ್ದೇಶಕರು. ಕರ್ನಾಟಕ ಇಂಜಿನಿಯರಿಂಗ್ ಸಂಶೋಧನಾ ಕೇಂದ್ರ. ಕೆ.ಆರ್.ಎಸ್.. ಮಂಡ್ಯ.
10) ನಿರ್ದೇಶಕರು. ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರಗಳ ನಿರ್ದೇಶನಾಲಯ. ಬೆಂಗಳೂರು.
11) ನಿರ್ದೇಶಕರು. ಜಲ ಮತ್ತು ನೆಲ ನಿರ್ವಹಣೆ ಸಂಸ್ಥೆ. ವಾಲ್ಮಿ. ಧಾರವಾಡ.
12) ನಿಬಂಧಕರು / ಮುಖ್ಯ ಇಂಜಿನಿಯರ್. ಎನಿಪಿಡಬ್ಲ್ಯೂಆರ್ಎಂ. ಬೆಂಗಳೂರು
13) ಶಾಖಾ ರಕ್ಷಾ ಕಡತ: ಹೆಚ್ಚುವರಿ ಪ್ರತಿಗಳು.

<u>ಪ್ರತಿ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸುತ್ತಾ, ಅಧೀನ ಕಚೇರಿಗಳಿಗೆ ಪ್ರಚಾರ ಪಡಿಸುವಂತೆ ಕೋರಿದೆ:</u>

1) ಮುಖ್ಯ ಇಂಜಿನಿಯರ್, ಹೈಡ್ರಾಲಜಿ ಮತ್ತು ಕೇಂದ್ರ ಯಾಂತ್ರಿಕ ಸಂಸ್ಥೆ, ಬೆಂಗಳೂರು.
2) ಮುಖ್ಯ ಇಂಜಿನಿಯರ್, ನೀರಾವರಿ ಕೇಂದ್ರ ವಲಯ, ಮುನಿರಾಬಾದ್.
3) ಮುಖ್ಯ ಇಂಜಿನಿಯರ್, ನೀರಾವರಿ ಯೋಜನೆಗಳ ವಲಯ, ಕಲಬುರಗಿ.
4) ಮುಖ್ಯ ಇಂಜಿನಿಯರ್, ಅಂತರ ರಾಜ್ಯ ಜಲ ವಿವಾದ ಘಟಕ, ಬೆಂಗಳೂರು.
5) ಮುಖ್ಯ ಇಂಜಿನಿಯರ್, ಬಿ.ಟಿ.ಡಿ.ಎ, ಬಾಗಲಕೋಟೆ.
6) ಮುಖ್ಯ ಇಂಜಿನಿಯರ್ (ತಾಂತ್ರಿಕ), ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು.
7) ಮುಖ್ಯ ಇಂಜಿನಿಯರ್, ಕಾ.ನೀ.ನಿ. ನಿಯಮಿತ, ಹೇಮಾವತಿ ನಾಲಾ ವಲಯ, ತುಮಕೂರು.
8) ಮುಖ್ಯ ಇಂಜಿನಿಯರ್, ಕಾ.ನೀ.ನಿ.ನಿಯಮಿತ, ಹೇಮಾವತಿ ಯೋಜನಾ ವಲಯ, ಗೊರೂರು.
9) ಮುಖ್ಯ ಇಂಜಿನಿಯರ್, ಕ.ನೀ.ನಿ.ನಿಯಮಿತ, ನೀರಾವರಿ (ದ) ಮೈಸೂರು.
10) ಮುಖ್ಯ ಇಂಜಿನಿಯರ್, ಕ.ನೀ.ನಿ.ನಿ., ತುಂಗಾ ಮೇಲ್ದಂಡೆ ಯೋಜನಾ ವಲಯ, ಶಿವಮೊಗ್ಗ.
11) ಮುಖ್ಯ ಇಂಜಿನಿಯರ್, ಕ.ನೀ.ನಿ.ನಿ., ಭದ್ರಾ ಮೇಲ್ದಂಡೆ ಯೋಜನಾ ವಲಯ, ಚಿತ್ರದುರ್ಗ.
12) ಮುಖ್ಯ ಇಂಜಿನಿಯರ್, ಎತ್ತಿನಹೊಳೆ ಯೋಜನಾ ವಲಯ, ತುಮಕೂರು.
13) ಮುಖ್ಯ ಇಂಜಿನಿಯರ್, ಕ.ನೀ.ನಿ.ನಿ., ನೀರಾವರಿ (ಉತ್ತರ) ವಲಯ, ಬೆಳಗಾಂ.
14) ಮುಖ್ಯ ಇಂಜಿನಿಯರ್, ಕ.ನೀ.ನಿ.ನಿ., ನೀರಾವರಿ ಯೋಜನಾ ವಲಯ, ಕಲಬುರಗಿ.
15) ಮುಖ್ಯ ಇಂಜಿನಿಯರ್, ಮಲಪ್ರಭಾ ಯೋಜನಾ ವಲಯ, ಧಾರವಾಡ.
16) ಮುಖ್ಯ ಇಂಜಿನಿಯರ್, ಕೃ.ಭಾ.ಜ.ನಿ.ನಿಯಮಿತ, ಅಣೆಕಟ್ಟು ವಲಯ, ಆಲಮಟ್ಟಿ.
17) ಮುಖ್ಯ ಇಂಜಿನಿಯರ್, ಕೃ.ಭಾ.ಜ.ನಿ.ನಿಯಮಿತ, ಕಾಲುವೆ ವಲಯ-1, ಭೀಮರಾಯನಗುಡಿ.
18) ಮುಖ್ಯ ಇಂಜಿನಿಯರ್, ಕೃ.ಭಾ.ಜ.ನಿ.ನಿ., ಕಾರ್ಯಾಚರಣೆ ಮತ್ತು ಪೋಷಣೆ ವಲಯ, ನಾರಾಯಣಪುರ.
19) ಆಡಳಿತಾಧಿಕಾರಿಗಳು, ಕಾವೇರಿ ಜಲಾನಯನ ಯೋಜನೆಗಳು, ಕಾವೇರಿ ಕಾಡಾ, ಮೈಸೂರು.
20) ಆಡಳಿತಾಧಿಕಾರಿಗಳು, ತುಂಗಭದ್ರಾ ಕಾಡಾ, ಶಿವಮೊಗ್ಗ.
21) ಆಡಳಿತಾಧಿಕಾರಿಗಳು, ಮಲಪ್ರಭಾ ಮತ್ತು ಘಟಪ್ರಭಾ ಕಾಡಾ, ಬೆಳಗಾಂ.
22) ಆಡಳಿತಾಧಿಕಾರಿಗಳು, ಕೃಷ್ಣಾ ಕಾಡಾ, ಭೀಮರಾಯನಗುಡಿ.
23) ಆಡಳಿತಾಧಿಕಾರಿಗಳು, ಕಾಡಾ ನೀರಾವರಿ ಯೋಜನೆಗಳ ವಲಯ, ಕಲಬುರಗಿ.


Generated from eOffice by DEEPA. C.K., WRD-SA-SRVB(DCK), SENIOR ASSISTANT, WATER RESOURCE SEC on 26/04/2022 12:31 PM
Generated from eOffice by DEEPA. C.K., WRD-SA-SRVB(DCK), SENIOR ASSISTANT, WATER RESOURCE SEC on 04/05/2022 04:36 PM